ದಿನಾಂಕ 21.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ-ಶ್ರೀ.ಕೆ.ಪಿ.ಬಿ. ವಕೀಲರಿಂದಃ-**

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ನಾನು ನೀಡಿದ ಮಾಹಿತಿಯ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ನಾನು ವಾದಿಯ ಮಗಳಾಗಿದ್ದು, ಅವರ ಜಿಪಿಎ ಹೋಲ್ಡರ್ ಆಗಿ ಸಾಕ್ಷ್ಯ ನುಡಿಯುತ್ತಿದ್ದೇನೆ. ನನ್ನ ತಾಯಿಗೆ 75 ವರ್ಷ ವಯಸ್ಸಾಗಿದ್ದು, ಕಾಲು ನೋವು ಇದೆ. ವಾದಿಗೆ ಅವರು ತವರು ಮನೆಯಿಂದ ಭಾಗ ನೀಡದೇ ಇದ್ದುದ್ದರಿಂದ ಅವರು ಈ ದಾವೆಯನ್ನು ಹೂಡಿರುತ್ತಾರೆ. ನನ್ನ ತಾಯಿಯು ದಾವೆಯನ್ನು ಸರ್ವೆ ನಂ. 98/3, 100/6, 100/7, 100/8 ಮತ್ತು 100/24 ರ ಸ್ವತ್ತುಗಳಿಗೆ ಸಂಬಂಧಿಸಿದಂತೆ ಹೂಡಿರುತ್ತಾರೆ. ದಾವಾ ಆಸ್ತಿಗಳು ಸೀಗೆತೋಡು ಗ್ರಾಮದಲ್ಲಿ ಇವೆ.

ದಾವಾ ಸ್ವತ್ತುಗಳ ಜಮಾಬಂಧಿ ದಾಖಲೆಗಳು ಮೂಲತಃ ವಾದಿಯ ತಮ್ಮನಾದ ಚೆಲುವಯ್ಯರವರ ಹೆಸರಿನಲ್ಲಿ ಇದ್ದವು ಎಂದರೆ ಸರಿ. ಚೆಲುವಯ್ಯರವರ ತಂದೆಯ ಹೆಸರು ವೆಂಕಟಪ್ಪ ಯಾನೆ ಶಿವಯ್ಯ. ಅವರ ತಂದೆಯ ಹೆಸರು ವೆಂಕಟಪ್ಪ. ನನ್ನ ಮುತ್ತಾತನಿಗೆ ಇಬ್ಬರು ಪತ್ನಿಯರು. ವಾದಿ ಮತ್ತು ಚೆಲುವಯ್ಯ ವೆಂಕಟಪ್ಪನ ಎರಡನೇ ಹೆಂಡತಿಯ ಭಾಗದವರು. ವೆಂಕಟಪ್ಪನ ಮೊದಲನೇ ಪತ್ನಿಗೆ ತಿಮ್ಮಯ್ಯ, ಅಪ್ಪಣ್ಣಯ್ಯ ಮತ್ತು ಅಣ್ಣಯ್ಯ ಎಂಬ ಮೂರು ಜನ ಗಂಡು ಮಕ್ಕಳು. ತಿಮ್ಮಯ್ಯನ ಮಗಳು ರಾಣಿ ಮತ್ತು ಅವರ ಮೊಮ್ಮಕ್ಕಳು ಜೀವಂತವಿದ್ದಾರೆ. ಅಪ್ಪಣ್ಣಯ್ಯನಿಗೆ ಸರಸು ಎಂಬ ಒಬ್ಬ ಮಗಳು ಇದ್ದಾಳೆ. ಈ ದಾವೆಯಲ್ಲಿ ವೆಂಕಟಪ್ಪನ ಮೊದಲನೇ ಪತ್ನಿಯ ಮಕ್ಕಳ ವಾರಸುದಾರರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ.

ದಾವಾ ಸ್ವತ್ತುಗಳು ವಾದಿಯ ಪಿತ್ರಾರ್ಜಿತ ಸ್ವತ್ತುಗಳು. ನನ್ನ ವಿವಾಹವು 1999 ನೇ ಇಸವಿಯಲ್ಲಿ ಕೇರಳದ ನಿವಾಸಿಯಾದ ಪ್ರಕಾಶ್ ಎಂಬುವವರೊಂದಿಗೆ

ಆಗಿರುತ್ತದೆ. ನಾನು ಈಗ ವಾದಿಯೊಂದಿಗೆ ಸೀಗೆತೋಡು ಗ್ರಾಮದಲ್ಲಿ ವಾಸವಾಗಿದ್ದೇನೆ. ಹೆಬ್ಬಾಳೆ ಗ್ರಾಮದಲ್ಲಿ ಚೆಲುವಯ್ಯನವರಿಗೆ ಸೇರಿದ ಸರ್ವೆ ನಂ. 98/1 ರಲ್ಲಿ 3 ಎಕರೆ 24 ಸೆಂಟ್ಸ್ ಜಮೀನು ಇತ್ತು ಎಂದರೆ ಇರಬಹುದು. ಅದರ ಪೈಕಿ 1 ಎಕರೆ 33 ಸೆಂಟ್ಸ್ ಚೆಲುವಯ್ಯರವರ ಸ್ವಾಧೀನಾನುಭವದಲ್ಲಿ ಇತ್ತು ಎಂದರೆ ಸರಿ. ಸದರಿ ಗ್ರಾಮದ ಸರ್ವೆ ನಂ.100/3 ರಲ್ಲಿ 7 ಸೆಂಟ್ಸ್ ಜಮೀನು ಚೆಲುವಯ್ಯನವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಅದೇ ಸರ್ವೆ ನಂಬರ್ ನಲ್ಲಿ ಎರಡುವರೆ ಸೆಂಟ್ಸ್ ಜಮೀನು ಚೆಲುವಯ್ಯನ ಸ್ವಾಧೀನಾನುಭವದಲ್ಲಿ ಇತ್ತು ಎಂದರೆ ಸರಿ. ಸದರಿ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನನ್ನ ಮಾವ ಚೆಲುವಯ್ಯರವರು ಜೀವಂತವಿದ್ದಾಗ ದಾವಾ ಸ್ವತ್ತುಗಳ ಸ್ವಾಧೀನವನ್ನು ನನ್ನ ತಾಯಿಯು ಹೊಂದಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮನೆಯ ಜಾಗದಲ್ಲಿ ಸ್ವಾಧೀನದಲ್ಲಿ ವಾದಿಯು ಇದ್ದರು ಎಂದು ಉತ್ತರಿಸಿರುತ್ತಾರೆ.

ಹೆಬ್ಬಾಳೆ ಗ್ರಾಮದ ಸರ್ವೆ ನಂ.97/2 ಮೂಲತಃ ನನ್ನ ಅಜ್ಜನಿಗೆ ಸೇರಿತ್ತು ಎಂದರೆ ಸರಿ. ಸದರಿ ಪಹಣಿಯಲ್ಲಿ 1 ನೇ ಪ್ರತಿವಾದಿಯ ಹೆಸರು ಮತ್ತು ವಾದಿಯ ತಮ್ಮ ಚೆಲುವಯ್ಯನ ಹೆಸರು ಇದೆ ಎಂದರೆ ಸರಿ. ಸದರಿ ಪಹಣಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಹೆಬ್ಬಾಳೆ ಗ್ರಾಮದ ಸರ್ವೆ ನಂ. 98/1 ವಿಸ್ತೀರ್ಣ 1 ಎಕರೆ 33 ಸೆಂಟ್ಸ್ , ಸರ್ವೆ ನಂ.100/3 ರಲ್ಲಿ 7 ಸೆಂಟ್ಸ್ ಜಮೀನು ಮತ್ತು ಎರಡುವರೆ ಸೆಂಟ್ಸ್ ಜಮೀನುಗಳನ್ನು ನನ್ನ ತಾಯಿಯು 2004 ರಲ್ಲಿ ಯಶೋಧ, ಶಿಲ್ಪಾ, ಇಂಪಾ ಮತ್ತು ಪ್ರೀತಮ್ ರವರು ಹಾಗೂ ನನ್ನ ತಾಯಿಯ ದೊಡ್ಡಪ್ಪನ ಮಗನಾದ ವಿ.ಎ.ವೆಂಕಟೇಶ್, ವಿ.ಎ. ಚಂದ್ರಶೇಖರ್ ಮತ್ತು ವಿ.ಟಿ. ರಾಣಿರವರಿಂದ ಖರೀದಿಸಿರುತ್ತಾರೆ. ಸದರಿ ಸ್ವತ್ತುಗಳು ನನ್ನ ತಾತನ ಸ್ವಾ ಧೀನಾನುಭವದಲ್ಲಿ ಇದ್ದವು ಎಂದರೆ ನನಗೆ ಗೊತ್ತಿಲ್ಲ.

ನನ್ನ ತಾತ ಮೃತರಾಗುವ ಸಂದರ್ಭದಲ್ಲಿ ಮೇಲೆ ತಿಳಿಸಿದ ಮೂರು ಸ್ವತ್ತುಗಳನ್ನು ನನ್ನ ತಾಯಿಗೆ ನೀಡಬೇಕೆಂದು ಚೆಲುವಯ್ಯನಿಗೆ ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತನ ಇಚ್ಛೆಯಂತೆ ಸದರಿ ಮೂರು ಸ್ವತ್ತುಗಳನ್ನು ಪ್ರತಿವಾದಿಗಳು ವಾದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ರೂ. 2,42,000/- ಗಳಿಗೆ ಮೂರು ಸ್ವತ್ತುಗಳನ್ನು ನನ್ನ ತಾಯಿಯು ಖರೀದಿ ಮಾಡಿರುತ್ತಾರೆ. ಸದರಿ ಸಂಪೂರ್ಣ ಹಣವನ್ನು ನನ್ನ ತಾಯಿಯೇ ನೀಡಿರುತ್ತಾರೆ. ಕ್ರಯ ಪತ್ರ ನೋಂದಾಣಿಯಾಗುವ ಸಂದರ್ಭದಲ್ಲಿ ನಾನು ಕೇರಳದ ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೆನು. ನಾನು ನನ್ನ ಗಂಡನ ಮನೆಗೆ ಸಮಾರಂಭಗಳ ಸಂದರ್ಭಗಳಲ್ಲಿ ಹೋಗಿ ಬರುತ್ತಿದ್ದೆನು. ರೂ. 2,42,000/- ಹಣವನ್ನು ನನ್ನ ತಾಯಿಯು ಮಾರಾಟಗಾರರಿಗೆ ನಗದು ರೂಪದಲ್ಲಿ ನೀಡಿರುತ್ತಾರೆ. ಸದರಿ ಹಣವನ್ನು ನನ್ನ ತಂದೆಯ ತಾಯಿಗೆ ನೀಡಿರುತ್ತಾರೆ. ನನ್ನ ತಂದೆಯು ಆ ಸಂದರ್ಭದಲ್ಲಿ ಶಾಲಾ ಬಸ್ ನ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಕ್ರಯಪತ್ರ ಬರೆಸಿಕೊಂಡ ಸಂದರ್ಭದಲ್ಲಿ ನನ್ನ ತಾಯಿಗೆ ಯಾವುದೇ ಪ್ರತ್ಯೇಕ ವರಮಾನ ಇರಲಿಲ್ಲ. ಯಾವ ಕಾರಣಕ್ಕಾಗಿ ಕ್ರಯಪತ್ರವನ್ನು ನನ್ನ ತಾಯಿಯ ಹೆಸರಿಗೆ ನೋಂದಾಣಿ ಮಾಡಿಸಲಾಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ನಾನು ಮೇಲೆ ತಿಳಿಸಿದ ಆಸ್ತಿಗಳನ್ನು ನನ್ನ ತಾಯಿಯು ರೂ. 2,42,000/- ಹಣವನ್ನು ಕೊಟ್ಟು ಖರೀದಿಸದೇ ಇದ್ದರೂ ಸಹ ನನ್ನ ತಾತನ ಇಚ್ಛೆಯಂತೆ ಸದರಿ ಸ್ವತ್ತನ್ನು ವಾದಿಯ ಹೆಸರಿಗೆ ಕಂದಾಯ ದಾಖಲೆಗಳನ್ನು ಮಾಡಿಸಿಕೊಳ್ಳುವ ಉದ್ದೇಶದಿಂದ ಕ್ರಯಪತ್ರವನ್ನು ನೋಂದಾಣಿ ಮಾಡಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ

**(ಸಾಕ್ಷಿದಾರರ ಸಹಿ)** ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.